ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ ಮತ್ತು ೩ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಛೇರ್ಮನ್:- ಪ್ರಸ್ತಾವ ಏನೆಂದರೆ ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲಾಯಿತು.

ಪ್ರಸ್ತಾವ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಕಾನೂನು ಸಚಿವರು):- ೧೯೯೨ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, "೧೯೯೨ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

೧೯೯೧-೯೨ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆಗಳ ಬಗ್ಗೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ೧೯೯೧-೯೨ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆಗಳನ್ನು ಏನು ಮಂಡಿಸಿದ್ದಾರೆ ಆ ಬಗ್ಗೆ ಈಗ ಚರ್ಚೆ ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಈ ಪೂರಕ ಅಂದಾಜಿನ ಪ್ರಕಾರ ಸುಮಾರು ೯೧೦.೨೨ ಕೋಟಿ ರೂಪಾಯಿಗಳ ಮಂಜೂರಾತಿಗಾಗಿ ಈಗ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸಲಾಗಿದೆ. ಇದರಲ್ಲಿ ಸುಮಾರು ಒಟ್ಟು ನಿವ್ವಳ, ನೆಟ್ ಔಟ್‌ಗೋ ಎಷ್ಟು ಎಂದರೆ ೪೧೦.೩೪ ಕೋಟಿ ರೂಪಾಯಿಗಳು. ಏಕೆಂದರೆ ೪೨.೦೭ ಕೋಟಿ ಮತ್ತು ೪೧೪.೪೬ ಕೋಟಿ ಏನು ಇದೆ ಅದು ಲೆಕ್ಕದ ಹೊಂದಾಣಿಕೆ ಎಂದರೆ ಅಡ್‌ಜಸ್ಟ್‌ಮೆಂಟ್‌ಗೆ ಸಂಬಂಧಪಟ್ಟ ಅಕೌಂಟ್ಸ್. ನಿವ್ವಳ ೪೧೦.೩೪ ಕೋಟಿ, ಇದರಲ್ಲಿ ಮುಖ್ಯವಾದ ಸಾಮಿಲ್ಟ್ಸರು ನಿಧಿಯ ಮೂಲ ಧನವನ್ನು ಹೆಚ್ಚು ಮಾಡತಕ್ಕ ಆದ್ಯಾದೇಶವನ್ನು ಹೊರಡಿಸಿದ್ದೇವೆ: ೬೦ ಕೋಟಿಯಿಂದ ೫೦೦ ಕೋಟಿ ರೂಪಾಯಿಗೆ ಏರಿಸಬೇಕೆಂದು ಹೇಳಿ. ಅದರಲ್ಲಿ ೫೦೦ ಕೋಟಿ ಹೆಚ್ಚು ಮಾಡಿದರೂ ಕೂಡ ಉಪಯೋಗ ಎಷ್ಟು ಎಂದರೆ ೨೭೨.೬೭ ಕೋಟಿ ರೂಪಾಯಿಗಳು. ಆದುದರಿಂದ ಇದನ್ನು ನಾವು ರಾಜ್ಯಪಾಲರ ಆದ್ಯಾದೇಶ ನಿಯಮದ

ಪ್ರಕಾರ ಅದು ರದ್ದು ಆಗಲಿಕ್ಕಿದೆ. ಶಾಶ್ವತವಾಗಿ ೫೦೦ ಕೋಟಿಗೆ ಸಾದಿಲ್ಯಾರು ಹೆಚ್ಚು ಮಾಡತಕ್ಕ ಒಂದು ಪ್ರಯತ್ನ ನಾವು ಮಾಡುತ್ತಿಲ್ಲ. ೬೦ ಕೋಟಿ ರೂಪಾಯಿಗಳಿಗೆ ಸಾದಿಲ್ಯಾರು ಮೂಲಧನ ಇದ್ದರೆ ಸಾಕು ಎಂದು we are not moving because that is what is re-adjusted. ಆದುದರಿಂದ ಈ ಪೂರಕ ಅಂದಾಜನ್ನು ಮಂಜೂರು ಮಾಡಬೇಕೆಂದು ತಮ್ಮ ಮುಖಾಂತರ ಸದನವನ್ನು ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಪ್ರಸ್ತಾಪವೇನೆಂದರೆ ೧೯೯೧-೯೨ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆ ಸಂಖ್ಯೆ ೧, ೬, ೮ ರಿಂದ ೧೬, ೧೮, ೨೦, ೨೨ ರಿಂದ ೨೪, ೨೭, ೨೯ ರಿಂದ ೩೮, ೪೦, ೪೧, ೪೩, ೪೫, ೪೬, ೪೯ರಿಂದ ೫೫, ೫೫ ಹಾಗೂ ೬೦ ಈ ಬೇಡಿಕೆಗಳಿಗೆ ಸರ್ಕಾರಕ್ಕೆ ಸದರಿ ವೆಚ್ಚವನ್ನು ಸಂದಾಯ ಮಾಡುವಂತೆ ಆಗಲು ಪೂರಕ ಅಂದಾಜು ಪಟ್ಟಿಯಲ್ಲಿ ಸೂಚಿಸಿದ ಮೊಬಲಗಿಗೆ ಮೀರದಂತೆ ಇರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಪೂರಕ ಬೇಡಿಕೆಗೆ ಒಪ್ಪಿಗೆ ನೀಡಲಾಯಿತು.

ಛೇರ್ಮನ್:- ಈಗ ೧೯೯೨-೯೩ನೇ ಸಾಲಿನ ಬೇಡಿಕೆಗಳು.

೧೯೯೨-೯೩ನೇ ಸಾಲಿನ ಪೂರಕ ಬೇಡಿಕೆಗಳ ಮೇಲೆ ಸಾಮಾನ್ಯ ಚರ್ಚೆ

(ವಸತಿ ಹಾಗೂ ನಗರಾಭಿವೃದ್ಧಿ)

ಬೇಡಿಕೆ ಸಂಖ್ಯೆ ೩೦, ೩೧ ಮತ್ತು ೩೨.

ಶ್ರೀ ಕೆ. ಜೆ. ಜಾರ್ಜ್ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು):- ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೩೦, ೩೧ ಮತ್ತು ೩೨ನೇ ಬೇಡಿಕೆಗಳು, ಇವುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಒದಗಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತಕ್ಕೆ ಮೀರದ ಹಣವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ವಸತಿ ಮತ್ತು ನಗರಾಭಿವೃದ್ಧಿ ಖಾತೆ

ಅಭಿಯಾಚನೆ ಕ್ರಮಾಂಕ ೩೦ - ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಬಿಟ್ಟು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ಪಡೆಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೨,೫೬,೫೬,೦೦೦-೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೬,೫೭,೦೭,೦೦೦-೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು,

ಅಭಿಯಾಚನ ಕ್ರಮಾಂಕ ೩೧ - ನಗರಾಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು